ಸಿಕ್ಕಿತರಲಿಲ್ಲ. ಮತ್ತೆ ಅವನೇನು ಆಸ್ತಿಪಾಸ್ತಿ ಎಂದು ಗಟ್ಟಿಯಾಗಿದ್ದ ಕುಳ ಅಲ್ಲ. ಗುಜರಾಣಿ ಕಳೆಯಲು ಒಂದಿಷ್ಟು ಜಮೀನು ಇತ್ತು. 'ತಲೆಗೆಳೆದರೆ ಕಾಲಿಗಿಲ್ಲ, ಕಾಲಿಗೆಳೆದರೆ ತಲೆಗಿಲ್ಲ' ಎನ್ನುವಂತಾ ಕುಟುಂಬ. ಅತ್ತೆ, ಮಾವ, ಮೈದುನ, ನಾದಿನಿ ಎಂದು ಮನೆ ತುಂಬಾ ಜನ. ಅಳಿಯ ಅನ್ನಿಸಿಕೊಂಡ ಮಹಾನುಭಾವ ಪದ್ದಯ್ಯನ ಥರ ಅವರಿವರ ಮನೆಯಿಂದ ಕರೆ ಬಂದರೆ ತೈನಾತಿಗೆ ಹೋಗುತ್ತಿದ್ದನಂತೆ. ಪದ್ದಯ್ಯನಿಗೆ ಅವನ ಪರಿಚಯವಾಗಿದ್ದೂ ಅಂತಲ್ಲೇ. 'ನಂಗೊಬ್ಳು ಮದುವೆಗೆ ನೆರೆದಿರೋ ಮಗಳಿದಾಳೆ' ಎಂದು ಇವರು ಕಿವಿ ಕಚ್ಚಿದರು.

'ಮನೇಲಿ ಕೇಳಿ ಹೇಳ್ತೀನಿ...' ಎಂದ ಅಂವ. ತಂಗಿಯ ಮದುವೆಗೆ ಪ್ರಯತ್ನಿಸದೆ ತಾನೇ ಮದುವೆ ಮಾಡಿಕೊಳ್ಳಲು ಕುಣಿಯುತ್ತಿರುವ ಈ ಅಣ್ಣನ ನಡವಳಿಕೆ ಅವನ ಅಮ್ಮನಿಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗಲಿಲ್ಲವಂತೆ. ಆಗಲಿ, ಮಗ ಮದುವೆಯಾಗಲಿ, ಒಂದಿಷ್ಟು ಕೊಟ್ಟು ಬಿಟ್ಟು ಮಾಡುವವರ ಮನೆ ಸಿಕ್ಕಿದರೆ ನಾಳೆ ಮಗಳಿಗೆ ಮದುವೆ ಮಾಡಲು ಅನುಕೂಲವಾಗುತ್ತದೆ ಎಂದು ಅಮ್ಮನ ಆಸೆ. 'ಹೌದ್ಹೌದು, ಮಾರಾಜರ ಮನೆಯಿಂದ ನನ್ನ ಹುಡುಕ್ಕೊಂಡು ಬರ್ತಾರೆ' ಎಂದು ವ್ಯಂಗ್ಯವಾಡಿ ಮಗ ತನ್ನ ಇಚ್ಛೆ ಈಡೇರಿಸಿಕೊಂಡ. ಹೀಗೆ ಈಡೇರಿಸಿಕೊಂಡ ಗಿರಾಕಿ ಕೈ ಹಿಡಿದ ಹೆಂಡತಿಯನ್ನು ಸುಖವಾಗಿ ಬಾಳಿಸಬೇಕಾದ್ದು ಅವನ ಕರ್ತವ್ಯ ತಾನೇ? ಮದುವೆ ಮಾಡಿಕೊಂಡು ಸಂಸಾರದ ರುಚಿ ಕಂಡ ಮೇಲೆ 'ಅವಸರ ಮಾಡ್ದೆ, ಅಮ್ಮನ ಮಾತು ಕೇಳಬೇಕಿತ್ತು' ಅನಿಸಿತಾ, ಅಥವಾ ಕಣ್ಣ ಕುಡಿಯಲ್ಲಿ ಸೊಸೆಯನ್ನು ಕಂಡರಾಗದ ಅತ್ತೆ ಏನಾದರೂ ಹಚ್ಚಿಕೊಟ್ಟರಾ, ಪರಮಾತ್ಮ ಬಲ್ಲ. ಒಟ್ಟಿನಲ್ಲಿ ಹೆಂಡತಿ ಕೈಂ ಆದಳು. ಬಿಸಿತುಪ್ಪ ಅನಿಸಿದಳು. 'ಹೋಗು ಅನ್ನಲಾಗ್ದೆ ಹೊಗೆ ಹಾಕಿದ್ರು' ಅನ್ನುವ ಹಾಗೆ ಅಳಿಯ ಹೆಂಡತಿಗೆ ಕೊಡಬಾರದ ಹಿಂಸೆ ಕೊಡಲು ಶುರು ಮಾಡಿ, ಮಾಲಕ್ಷ್ಮಿ ಬರೀ ಪಾಪದ್ದು, ಎದುರು ವಾದಿಸಿ ಗೊತ್ತೇ ಇಲ್ಲದ್ದು, ಹಿಂಸೆ, ಅವಮಾನ, ಅರೆಹೊಟ್ಟೆ ಕಂಡೇ ಗೊತ್ತಿಲ್ಲದ್ದು. ಬಡತನವೋ, ಮತ್ತೊಂದೋ ಒಬ್ಬಳೇ ಮಗಳಿಗೆ ಯಾವುದರಲ್ಲೂ ಅರಕೆ ಮಾಡಿರಲಿಲ್ಲ ಪದ್ದಯ್ಯ. ತಾವು ಗಂಡ, ಹೆಂಡತಿ ಅರೆಹೊಟ್ಟೆ ಉಣ್ಣಬೇಕಾದ ಪ್ರಸಂಗ ಬಂದರೂ ಮಗಳಿಗೆ ಹೊಟ್ಟೆ ತುಂಬಾ ಅನ್ನ ಹಾಕಿದವರು. ಬರೀ ಅನ್ನ ಅಲ್ಲ, ಯಾರ ಮನೆಗೆ ಅಡುಗೆಗೆ ಹೋದರೂ ವಾಪಸು ಬರುವಾಗ ಅಲ್ಲಿ ತಾವೇ ಮಾಡಿದ ವಿಶೇಷಭಕ್ಷ್ಯಗಳನ್ನು ಕೇಳಿ ಕಟ್ಟಿಸಿಕೊಂಡು ತರುತ್ತಿದ್ದರು ಪದ್ದಯ್ಯ. ಅವರ ಈ ಅಭ್ಯಾಸ ಗೊತ್ತಿದ್ದ ಮನೆಯವರು, 'ತಗಳಿ, ಮಗಳಿಗೆ ಕೊಡಿ' ಎಂದು ತಾವೇ ಪೊಟ್ಟಣ ಕಟ್ಟಿಕೊಟ್ಟು ಉದಾರತೆ ಮೆರೆಯುತ್ತಿದ್ದರು. ಹೀಗೆ ಬಾಳೆಹಣ್ಣಿನ ಗುಡಾಣದಲ್ಲಿ ಸುಕುಮಾರಿಯಂತೆ ಬೆಳೆದ ಮಾಲಕ್ಷ್ಮಿ ಅತ್ತೆಮನೆಯ ರಗಳೆಗೆ ಹೊಂದಿಕೊಳ್ಳಲಾಗದೆ ಹೋದಂತೆ ತಿರುಗಿ ಬಂದಿದ್ದರಲ್ಲಿ ಆಶ್ಚರ್ಯ ಏನಿರಲಿಲ್ಲ. 'ಹೆಣ್ಣುಮಕ್ಳು ಅಂದ್ರೆ ಸಸಾರ ಅಂದ್ಕಂಡಿದಾನಾ? ಬಿಡ್ಬೇಡಿ ಮುಂಡೇಗಂಡನ್ನ, ಕೇಸು ಹಾಕಿ ಜೀವನಾಂಶ ಕಕ್ಕಿಸಿ ಭಟ್ರೇ...' ಎತ್ತಿಕಟ್ಟಲು ನೋಡಿದವರು ಕೆಲವರಾದರೂ ಇದ್ದರು. ಭಟ್ಟರು ಕಿವಿ ಜೋತು ಬಿಟ್ಟಿರಲಿಲ್ಲ.

'ಕೇಸು, ಮತ್ತೊಂದು ಅಂತ ದುಡ್ಡು ಖರ್ಚುಮಾಡೋಕೆ, ಕೋರ್ಟಿಗೆ ಅಲೆಯೋಕೆ ಯಾರಿಗಿದೆ ಪುರುಸೊತ್ತು? ಮೇಲೊಬ್ಬ ಇದಾನೆ ಅನ್ನೋದು ಹೌದೂಂತಾದ್ರೆ ನೋಡ್ಕಂತಾನೆ' ಎಂದಿದ್ದರು ಪದ್ದಯ್ಯ ಹತಾಶೆಯ ದನಿಯಲ್ಲಿ. ಮೇಲೊಬ್ಬ ಇರುವುದು ಸುಳ್ಳೋ, ಬದ್ಧವೋ ಪದ್ದಯ್ಯನ ನಂಬಿಕೆ ನಿಜವಾಯ್ತು. ಹೆಸರಿಗೆ ಮಾತ್ರಾ ಅಳಿಯ ಅನ್ನಿಸಿಕೊಂಡಿದ್ದವನು, ದುಃಸ್ವಪ್ನವಾಗಿ ಕಾಡಿದವನು, ಒಂದು ಅಪಘಾತದಲ್ಲಿ 'ಇನ್ನಿಲ್ಲ' ಅನ್ನಿಸಿಕೊಂಡ. ಯಾರದೋ ಸ್ಕೂಟರಿನಲ್ಲಿ ಹಿಂದೆ ಕೂತು ಮನೆಗೆ ಬರುತ್ತಿದ್ದನಂತೆ. ರಸ್ತೆಯ ಉಬ್ಬಿನಲ್ಲಿ ಆಯತಪ್ಪಿ ಕೆಳಗೆ